OS No. 124/2024 PW-1

**ದಿನಾಂಕ 27.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಆರ್.ಕೆ ವಕೀಲರಿಂದಃ**

ನಾನು ಪ್ರತಿವಾದಿಗೆ 35 ಲಕ್ಷ ಕೊಟ್ಟ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ಬಗ್ಗೆ ಚೆಕ್‌ಗಳನ್ನು ಮತ್ತು ಸ್ಟಾಂಪ್ ಪೇಪರ್ ಗಳನ್ನು ಹಾಜರುಪಡಿಸಿದ್ದೇನೆ. ಇದನ್ನು ಹೊರತುಪಡಿಸಿ ಬ್ಯಾಂಕ್ ಲೆಕ್ಕ ಪತ್ರಗಳನ್ನು ಹಾಜರುಪಡಿಸಿದ್ದೇನೆ. ನಾನು ಹಳವನ್ನು ಬ್ಯಾಂಕಿನಿಂದ ಪಡೆದ ಬಗ್ಗೆ ದಾಖಲೆಗಳಲ್ಲಿ ನಮೂದಿದೆ. ಈ ಬಗ್ಗೆ ದಿನಾಂಕಗಳನ್ನು ಹೇಳಲು ಬ್ಯಾಂಕ್ ದಾಖಲೆಗಳಲ್ಲಿ ನಮೂದಿದೆ. ಬ್ಯಾಂಕ್ ದಾಖಲೆಗಳಿಗೂ ಮತ್ತು ಹಣ ಕೊಟ್ಟ ಬಗ್ಗೆ ಸಾಮಿತ್ಯ ಇಲ್ಲ ಅಂದರೆ ಸುಳ್ಳು. ನನ್ನ ಬ್ಯಾಂಕ್ ಖಾತೆಯಲ್ಲಿ 35 ಲಕ್ಷ ಹಣ ಇರಲಿಲ್ಲ ಅಂದರೆ ಸುಳ್ಳು.

ಬಂಗಾರ ಅಡವಿಟ್ಟಿದ್ದ ಮತ್ತು ಹಣ ಕೊಟ್ಟ ಬಗ್ಗೆ ಸಾಮಿತ್ಯ ಇಲ್ಲ ಅಂದರೆ ಸುಳ್ಳು. ಕರಾರುಪತ್ರ ನೋಂದಣಿಯಾಗಿಲ್ಲ ಅಂದರೆ ನಿಜ. ನೋಂದಣಿ ಮಾಡಿಸಿಕೊಳ್ಳಲು ಪ್ರತಿವಾದಿಯು ಮಾಡಿಸಿಕೊಡುತ್ತೀನಿ ಎಂದು ಹೇಳಿದರು.

ದಿನಾಂಕ 17.04.2024 ರಂದು ಪ್ರತಿವಾದಿಗೆ ನೋಟೀಸ್ ಜಾರಿ ಆದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ಈ ಬಗ್ಗೆ ದಾಖಲೆ ಇಲ್ಲ ಎಂದರೆ ಸುಳ್ಳು. ಪ್ರತಿವಾದಿಗೆ ನೋಟೀಸ್ ಜಾರಿ ಆಗಿಲ್ಲ ಎಂದರೆ ಸುಳ್ಳು. ಪ್ರತಿವಾದಿ ನನಗೆ 4 ಲಕ್ಷ ಹಣದ ಸಾಲಕ್ಕಾಗಿ ಖಾಲಿ ಸ್ಟಾಂಪ್ ಪೇಪರ್ ಮತ್ತು ಚೆಕ್ ಗಳನ್ನು ಕೊಟ್ಟಿದ್ದಾರೆ ಎಂದರೆ ಸುಳ್ಳು.

ದಿನಾಂಕ 22.08.2022 ರಲ್ಲಿ ನಿತಿನ್ ರಾಜ್ @ ಅರ್ಜುನ್ ಮುಖಾಂತರ ಪ್ರತಿವಾದಿಯು ನನ್ನ ಬಳಿ ಸಾಲ ಕೇಳಿದರು ಎಂದರೆ ಸುಳ್ಳು. ಅದೇ ದಿನ ನಾನು ಪ್ರತಿವಾದಿಗೆ ರೂ.3,40,000/- ಹಣವನ್ನು ಕೊಟ್ಟಿದ್ದೇನೆ ಎಂದರೆ ಸುಳ್ಳು. ದಿನಾಂಕ 23.08.2022 ರಂದು ನಾನು ಪ್ರತಿವಾದಿಗೆ ರೂ.10,000/- ಗೂಗಲ್ ಪೇ ಮುಖಾಂತರ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರ ಎಂದು ಹೇಳುತ್ತಾರೆ. ದಿನಾಂಕ 25.08.2022 ರಂದು ನಾನು ಪ್ರತಿವಾದಿಗೆ ರೂ.6,000/- ಗೂಗಲ್ ಪೇ ಮುಖಾಂತರ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರ ಎಂದು ಹೇಳುತ್ತಾರೆ. ದಿನಾಂಕ

26.08.2022 ರಂದು ನಾನು ಪ್ರತಿವಾದಿಗೆ ರೂ.10,000/- ಗೂಗಲ್ ಪೇ ಮುಖಾಂತರ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರ ಎಂದು ಹೇಳುತ್ತಾರೆ. ದಿನಾಂಕ 26.08.2022 ರಂದು ನಾನು ಮತ್ತೆ ಪ್ರತಿವಾದಿಗೆ ರೂ.10,000/- ಗೂಗಲ್ ಪೇ ಮುಖಾಂತರ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರ ಎಂದು ಹೇಳುತ್ತಾರೆ. ದಿನಾಂಕ 28.08.2022 ರಂದು ನಾನು ಪ್ರತಿವಾದಿಗೆ ರೂ.24,000/- ಗೂಗಲ್ ಪೇ ಮುಖಾಂತರ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರ ಎಂದು ಹೇಳುತ್ತಾರೆ.

ಈ ರೂ.4,00,000 ಹಣದ ವ್ಯವಹಾರಕ್ಕೆ ನನಗೆ ಪ್ರತಿವಾದಿ 7 ಖಾಲಿ ಚೆಕ್ ಗಳನ್ನು ಮತ್ತು ಸ್ಟ್ಯಾಂಪ್ ಪೇಪರ್ ಗಳನ್ನು ಕೊಟ್ಟಿದ್ದಾರೆ ಎಂದರೆ ಸುಳ್ಳು. ಜನವರಿ 2024 ರವರೆಗೆ ಪ್ರತಿವಾದಿ ನನಗೆ ಬಡ್ಡಿಯನ್ನು ಕೊಟ್ಟಿದ್ದಾರೆ ಎಂದರೆ ಸುಳ್ಳು. 4 ಲಕ್ಷ ಹಣ ಬಿಟ್ಟು ನನಗೂ ಮತ್ತು ಪ್ರತಿವಾದಿಗೆ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸುಳ್ಳು. ನಾನು ಹೇಳಿದಂತೆ ಬೇರೆ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸುಳ್ಳು. ನಾನು ಸಾಲ ಕೊಡುವಾಗ ಏನಿದೆ ಎಂದು ಕೇಳಿದಾಗ ಸಾಕ್ಷಿಯು ನಿವೇಶನ ಮತ್ತು ಆಸ್ತಿ ಇದೆ ಎಂದು ತೋರಿಸಿದಾಗ ಅದನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ಯಾವತ್ತು ತಿಳಿಸಿಲ್ಲ ಎಂದರೆ ಸುಳ್ಳು. ಪ್ರತಿವಾದಿ ಯಾವುದೇ ಕರಾರು ಮಾಡಿಕೊಟ್ಟಿಲ್ಲ ಎಂದರೆ ಸುಳ್ಳು. ಖಾಲಿ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವಾ ಹಾಕಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**